# 2 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ನಂಜನಗೂಡು

**ಸಿ.ಸಿ,ನಂ.1416/2016**

**ಫಿರ್ಯಾದಿ** ಟ್ರಾಫಿಕ್ ಪೊಲೀಸ್ ಠಾಣೆ,
ನಂಜನಗೂಡು.

**ವಿರುದ್ಧ**

**ಆರೋಪಿ** ಸಿ.ಕೆ.ರಹೀದ್ ಬಿನ್ ಟಿ.ತಾಹೀರ್, 26 ವರ್ಷ,
ಕೊಯಿಲಾಂಡಿ, ಕಲ್ಲಿನಕೋಟೆ, ಕೇರಳ ರಾಜ್ಯ.

## ಆರೋಪಣೆ

ಶ್ರೀಮತಿ ವಿನುತ ಡಿ. ಎಸ್., *ಬಿ.ಎ ಸ್ಸಿ (ಸೆರಿಕಲ್ಚರ್) , ಎಲ್.ಎಲ್.ಬಿ. 2ನೇ ಹೆಚ್ಚುವರಿ ಸಿವಿಲ್* ಜಡ್ಜ್ ಮತ್ತು ಜೆ.ಎಂ.ಎಫ್.ಸಿ. *ನ್ಯಾಯಾಧೀಶರಾದ ನಾನು ನಿಮ್ಮ ಮೇಲೆ ದೋಷಾರೋಪಿಸುವುದೇನೆಂದರೆ:*

ದಿನಾಂಕ 30-12-2015 ರಂದು ಬೆಳ್ಳಿಗ್ಗೆ 11-00 ಗಂಟೆ ಸಮಯದಲ್ಲಿ ನಂಜನಗೂಡು ಸಂಚಾರಿ ಪೊಲೀಸ್ ಠಾಣಾ ಸರಹದಿದಗೆ ಬರುವ ನಂಜನಗೂಡು ಗುಂಡ್ಲುಪೇಟೆ ಮುಖ್ಯ ಹೆದ್ದಾರಿ ರಸ್ತೆಯಲ್ಲಿ ಆರೋಪಿಯಾದ ನೀವು ನಿಮ್ಮ ಬಾಬ್ತು ಕೆಎಲ್-56 ಸಿ 8012 ಮೋಟಾರ್ ಸೈಕಲನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಮಾನವ ಪ್ರಾಣಕ್ಕೆ ಅಪಾಯವಾಗುವ ರೀತಿಯಲ್ಲಿ ಚಾಲನೆ ಮಾಡಿಕೊಂಡು ಬಂದಿದ್ದು ಆ ಮೂಲಕ ಭಾ ದಂ ಸಂ ಕಲಂ 279 ರ ಅಡಿಯಲ್ಲಿ ದಂಡನೀಯವಾದ ಅಪರಾಧಗಳನ್ನು ನನ್ನ ಸಂಜ್ಞಾನದಲ್ಲಿ ಎಸಗಿರುವಿರಿ.

ಎರಡನೆಯದಾಗಿ ಅದೇ ದಿನ , ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ ಆರೋಪಿಯಾದ ನೀವು ಸದರಿ ಬೈಕನ್ನು ಅತಿವೇಗವಾಗಿ ಹಾಗೂ ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಮುಂದೆ ಹೋಗುತ್ತಿದ್ದ ಚಾಸಾ-1 ರವರ ಬೈಕ್ ಸಂಖ್ಯೆ ಕೆಎ-09-ಇಜೆಡ್ 8847 ಕ್ಕೆ ಹಿಂಭಾಗದಿಂದ ಹೋಗಿ ಡಿಕ್ಕಿ ಮಾಡಿದ ಪರಿಣಾಮ ಬೈಕ್ ಸವಾರನ ಹಿಂದೆ ಕುಳಿತ್ತಿದ್ದ ಅವರ ತಾಯಿ ರತ್ನಮ್ಮರವರು ಕೆಳಗೆ ಬಿದ್ದಾಗ ತಲೆ ಹಾಗೂ ಮೈಕೈಗಳಿಗೆ ತೀವ್ರ ಸ್ವರೂಪದ ಗಾಯಗಳಾಗಿ ಮೈಸೂರು ಜೆ ಎಸ್ ಎಸ್ ಆಸ್ಪತ್ರೆಗೆ ದಾಖಲಿಸಿದ್ದು, ನಾಗಪ್ಪರವರಿಗೆ ಚಿಕಿತ್ಸೆ ಫಲಕಾರಿಯಾಗದೇ ದಿನಾಂಕ 31-12-2015 ರಂದು ಬೆಳ್ಳಿಗೆಗ 09-30 ಗಂಟೆ

ಸಮಯಕ್ಕೆ ಮೃತಪಟ್ಟಿದ್ದು ಆ ಮೂಲಕ ಭಾ ದಂ ಸಂ  ಕಲಂ 304 ಎ ರ ಅಡಿಯಲ್ಲಿ  ದಂಡನೀಯವಾದ ಅಪರಾಧಗಳನ್ನು ನನ್ನ ಸಂಜ್ಞಾನದಲ್ಲಿ ಎಸಗಿರುವಿರಿ.

ಕೊನೆಯದಾಗಿ, ಅದೇ ದಿನ, ಅದೇ ವೇಳೆ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ವಾಹನವನ್ನು ನಿಲ್ಲಿಸಿದೆ  ಮತ್ತು ಗಾಯಾಳುವನ್ನು ಆಸ್ಪತ್ರೆ ಚಿಕಿತ್ಸೆಗೆ ಕರೆದು ಕೊಂಡು ಹೋಗದೇ, ಸದರಿ ಅಪಘಾತದ ವಿಚಾರವನ್ನು ಪೊಲೀಸರಿಗೆ ನೀಡದೆ ಹೊರಟುಹೋಗಿದ್ದು ಆ ಮೂಲಕ ಮೋಟಾರ್ ವಾಹನ ಕಾಯ್ದೆ ಕಲಂ 187 ರ ಅಡಿಯಲ್ಲಿ ದಂಡನೀಯವಾದ ಅಪರಾಧಗಳನ್ನು ನನ್ನ ಸಂಜ್ಞಾನದಲ್ಲಿ ಎಸಗಿರುವಿರಿ.

ಸದರೀ ಆರೋಪಿಣೆಯು ನನ್ನ ಸಂಜ್ಞಾನದಲ್ಲಿದ್ದು ವಿಚಾರಣೆಯು ಇದೇ ನ್ಯಾ ಯಾಲಯದಲ್ಲಿ ನಡೆಯುವಂತೆ ನಾನು ನಿರ್ದೇಶಿಸಿರುತ್ತೇನೆ.

**ಪ್ರಶ್ನೇ:1: ಈಗ ನಿಮಗೆ ಓದಿ ಹೇಳಿದ ಆಪಾದನೆ ತಿಳಿಯಿತೇ?**

ಉತ್ತರ:-

**ಪ್ರಶ್ನೆ:2: ಮೇಲ್ಕಂಡ ಆರೋಪವನ್ನು ನೀವು ಒಪ್ಪಿಕೊಳ್ಳುವಿರೋ? ಅಥವಾ ವಿಚಾರಣೆ ಆಗಬೇಕೆಂದು ಬಯಸುವಿರೋ?**

ಉತ್ತರ:-

ಮೇಲ್ಕಂಡ ಅಪಾದನೆಯನ್ನು ಆರೋಪಿಗೆ ಓದಿ ಹೇಳಿ ಅವರು ಉತ್ತರಿಸಿದಂತೆಯೇ ತೆರೆದ ನ್ಯಾಯಾಲಯದಲ್ಲಿ ಬರೆದುಕೊಂಡಿದ್ದು ಆರೋಪಿ ನೀಡಿರುವ ಉತ್ತರವು ಸಂಪೂರ್ಣ ಹಾಗೂ ಸರಿಯಾದ ಮಾಹಿತಿ ಒಳಗೊಂಡಿದೆ ಎಂದು ನಾನು ಈ ಮೂಲಕ ದಿಃ                    ರಂದು ದೃಢೀಕರಿಸುತ್ತೇನೆ.

**2 ನೇ ಹೆಚ್ಚುವರಿ ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.**
ನಂಜನಗೂಡು